ಒ ಎಸ್ 11/2021 ಪಿ.ಡಬ್ಲ್ಯೂ 1

ಇಂದು ದಿಃ 25.01.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎಸ್ ಎನ್ ವಕೀಲರಿಂದಃ

ನಾನು ಸಣ್ಣಪ್ಪನವರ ಮೂರನೆ ಮಗಳು. ನಾನು 10 ನೇ ತರಗತಿಯವರೆಗೂ ಓದಿದ್ದೇನೆ. ನಾನು 1980 ರಲ್ಲಿ ಜನಿಸಿರುತ್ತೇನೆ. ನನಗೆ ಅಂದಾಜು 46 ವರ್ಷ ವಯಸ್ಸು. ನನ್ನ ತಂದೆ ಸಣ್ಣಪ್ಪ ಮತ್ತು ನಾಗರಾಜು ಮತ್ತು ಮಹೇಶ ಎಲ್ಲರೂ ಬೇರೆ ಬೇರೆ ವಾಸವಿದ್ದಾರೆ ಎಂದರೆ ಸರಿ. ಪರಿಮಳ ರವರನ್ನು ಚಾಮರಾಜನಗರಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ. ನಾನು ಮೈಸೂರಿನಲ್ಲಿ ವಾಸವಿದ್ದೇನೆ. ನಮ್ಮ ಮದುವೆಯನ್ನು ನನ್ನ ತಂದೆ ಅದ್ದೂರಿಯಾಗಿ ಮಾಡಿಕೊಟ್ಟಿದ್ದಾರೆ ಎಂದರೆ ಮಾಮೂಲಿ ಮಾಡಿಕೊಟ್ಟಿರುತ್ತಾರೆ ಎಂದು ಸಾಕ್ಷಿ ನುಡಿಯುತ್ತಾರೆ.

ದಿಃ01.2.1995 ರಲ್ಲಿ ಸರ್ವೆ ನಂಬರ್ 95/2 ಅನ್ನು ನನ್ನ ತಂದೆ ಕುಟುಂಬದ ದರ್ದಿಗಾಗಿ ಚಂದ್ರಶೇಖರ ರವರಿಗೆ ಆಧಾರ ಮಾಡಿದ್ದರು ಎಂದರೆ ಸರಿ. ನಂತರ ಅದೇ ಜಮೀನನ್ನು ದಿಃ06.12.1995 ರಂದು ಈ ದಾವೆಯ 6 ನೇ ಪ್ರತಿವಾದಿಗೆ ರೂ.40000/- ಕ್ಕೆ ನೋಂದಾಯಿತ ಕ್ರಯ ಪತ್ರದ ಮೂಲಕ ಮಾರಾಟ ಮಾಡಿ ಸ್ವಾಧೀನ ಕೊಟ್ಟು ನಂತರ ಆ ಆಸ್ತಿಯ ಖಾತೆಗಳು ಚಂದ್ರಶೇಖರ ರವರ ಹೆಸರಿನಲ್ಲಿ ಬರುತ್ತಿದ್ದೆ, ಆಗ ನಾವೆಲ್ಲರೂ ಅಪ್ರಾಪ್ತರಾಗಿದ್ದೆವು ಆಗ ನಮ್ಮ ಪರವಾಗಿಯು ಮಾಡಿಕೊಟ್ಟಿದ್ದರು ಎಂದರೆ ಸರಿ. ಆ ಲಾಗಾಯ್ತಿನಿಂದ 6 ನೇ ಪ್ರತಿವಾದಿ ಖರೀದಿಸಿದ ಆಸ್ತಿಯಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. 6 ನೆ ಪ್ರತಿವಾದಿ ಆಧಾರ ಭೋಗ್ಯ ದ ರೂ.30000/- ವನ್ನು ಕೊಟ್ಟು ತೀರುವಳಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. 6 ನೇ ಪ್ರತಿವಾದಿಯ ಮಗನಾದ ಬಸವರಾಜುವಿನ ಹೆಸರಿನಲ್ಲಿ ಆಸ್ತಿಯ ದಾಖಲೆಗಳು ನಮೂದು ಆಗಿವೆ ಎಂದರೆ ಆ ಬಗ್ಗೆ ನಮಗೆ ಗೊತ್ತಿಲ್ಲ. ಬಸವರಾಜು ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ.

ದಾವಾ ಐಟಂ 2 ಅನ್ನು ಮಾರಾಟ ಮಾಡಿದ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಮತ್ತು ನನ್ನ ತಂದೆ 6 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಜಮೀನು ಹೊರತು ಪಡಿಸಿ ಇನ್ನೂ ಜಮೀನುಗಳು ಇದ್ದು ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ಹೆಗ್ಗಡಹಳ್ಳಿ ಗ್ರಾಮದ ಸರ್ವೆ ನಂಬರ್ 74 ರ ಜಮೀನು ಈಗಲೂ ಸಹ ನಮ್ಮ ಕುಟುಂಬದಲ್ಲಿ ಇದ್ದು ಅದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ.

ಮತ್ತು 6ನೇ ಪ್ರತಿವಾದಿಗೆ ಮಾರಾಟ ಮಾಡಿದ ಆಸ್ತಿಯನ್ನು ದಾವೆಯಲ್ಲಿ ಸೇರಿಸಿ ಉದ್ದೇಶಪೂರ್ವಕವಾಗಿ ದಾವೆ ಸಲ್ಲಿಸಿ ಅವರಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಚೆನ್ನಾಗಿರುವ ಕಾರಣ ದಾವಾ ಐಟಂ 2 ಮತ್ತು 3ರಲ್ಲಿ ಭಾಗ ಬೇಕು ಎಂದು ಅನಾವಶಕವಾಗಿ ಸುಳ್ಳು ದಾವೆ ಸಲಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಂದ ಮತ್ತು ತಮ್ಮನನ್ನು ಉದ್ದೇಶಪೂರ್ವಕವಾಗಿ ದಾವೆಯಲ್ಲಿ ಹಾಜರಾಗದಂತೆ ನೋಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದರು. ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.